1588ನೇ ಚು. ಉ SL.NO:-36 ದಿ:-12.03.2026

# ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ಕರ್ನಾಟಕ ವಿಧಾನ ಪರಿಷತ್ತು ಸದಸ್ಯರಾದ ಶ್ರೀ ತಿಪ್ಪಣ್ಣಪ್ಪ ಕಮಕನೂರ ಹಾಗೂ ಶ್ರೀ ಶಶೀಲ್ ಜಿ. ನಮೋಶಿ - ರವರುಗಳು "ರಾಜ್ಯದ 230 ಸಮುದಾಯ ಆರೋಗ್ಯ ಕೇಂದ್ರಗಳನ್ನು ಕೆಳದರ್ಜೆಗೆ ಇಳಿಸುವ ಮತ್ತು ತಜ್ಞ ವೈದ್ಯರ ವರ್ಗಾವಣೆಯಿಂದ ಗ್ರಾಮೀಣ ಆರೋಗ್ಯ ಸೇವೆಯ ಮೇಲಾಗುವ ದುಷ್ಪರಿಣಾಮಗಳ ಕುರಿತ" ವಿಷಯವಾಗಿ ಪ್ರಸ್ತಾಪಿಸಲಾದ ಶೂನ್ಯ ವೇಳೆಯ ಪ್ರಸ್ತಾಪಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಹೇಳಿಕೆ.

*********

ರಾಜ್ಯದಲ್ಲಿ 147 ತಾಲ್ಲೂಕು ಆಸ್ಪತ್ರೆಗಳು ಹಾಗೂ 88 ಸಮುದಾಯ ಆರೋಗ್ಯ ಕೇಂದ್ರಗಳನ್ನು CEmONC ಕೇಂದ್ರ (FRU-CHC)ಗಳೆಂದು ಹಾಗೂ ಉಳಿದ 187 ಸಮುದಾಯ ಆರೋಗ್ಯ ಕೇಂದ್ರಗಳನ್ನು Non-FRU CHC ಗಳೆಂದು ಗುರುತಿಸಲಾಗಿರುತ್ತದೆ. ಈ 235 CEmONC ಕೇಂದ್ರಗಳನ್ನು 24*7 ಹೆರಿಗೆ ಸೇವೆಗಳಿಗಾಗಿ (ಸಿಜೇರಿಯನ್ ಶಸ್ತ್ರಚಿಕಿತ್ಸೆ ಒಳಗೊಂಡಂತೆ) ಕಾರ್ಯಗತಗೊಳಿಸುವುದರಿಂದ ತುರ್ತು, ಸಹಜ ಮತ್ತು ಸಿಜೇರಿಯನ್ ಸೇವೆಗಳಿಗೆ ಕೇವಲ ಜಿಲ್ಲಾ ಮಟ್ಟದ ಆಸ್ಪತ್ರೆಗಳನ್ನು ಅವಲಂಬಿಸದೇ ಸ್ಥಳೀಯ ತಾಲ್ಲೂಕು ಮಟ್ಟದಲ್ಲಿಯೂ ಸಹ ಈ ತುರ್ತು ಸೇವೆಗಳನ್ನು ಒದಗಿಸಲು ಸಹಾಯಕವಾಗಲಿದೆ.

ಕಡಿಮೆ ಕಾರ್ಯಕ್ಷಮತೆವುಳ್ಳ 163 ಸಮುದಾಯ ಆರೋಗ್ಯ ಕೇಂದ್ರಗಳು ನಿರೀಕ್ಷಿತ ಮಟ್ಟದಲ್ಲಿ ಸಹಜ ಹೆರಿಗೆ ಮತ್ತು ಸಿಜೇರಿಯನ್ ಹೆರಿಗೆ ಸೇವೆಗಳನ್ನು ಸಮುದಾಯಕ್ಕೆ ಒದಗಿಸದೆ ಇರುವುದರಿಂದ, ಈ 163 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ MCH ತಜ್ಞರ ಸೇವೆಗಳು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಈ ತಜ್ಞರ ತಜ್ಞತೆಯನ್ನು ಬಳಸಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಅವರ ತಜ್ಞತೆಯು ಕ್ಷೀಣಿಸುವುದಲ್ಲದೇ ಜನರಿಗೆ ಪರಿಪೂರ್ಣ ಹೆರಿಗೆ ಸೇವೆಗಳನ್ನು ಸೂಕ್ತ ಸಮಯದಲ್ಲಿ ನೀಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಜನರು ಜಿಲ್ಲಾಸ್ಪತ್ರೆ ಅಥವಾ ಖಾಸಗಿ ಆಸ್ಪತ್ರೆಗಳನ್ನು ಅವಲಂಬಿಸಿರುತ್ತಾರೆ.

**ಟ್ರೈಯಾಡ್ ನೀತಿಯಿಂದಾಗಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಆಗುವ ಕೆಳಕಂಡ ಅನುಕೂಲಗಳು:**

- ಸೂಕ್ತ ಸಮಯದಲ್ಲಿ ಅಂದರೆ ಹೆರಿಗೆ ನೋವು ಅಥವಾ ತೊಡಕುಗಳು ಸಂಭವಿಸಿದ 1 ಗಂಟೆಯೊಳಗೆ ಹತ್ತಿರದ CEmONC ಕೇಂದ್ರವನ್ನು ತಲುಪಲು ಸಾಧ್ಯವಾಗುತ್ತದೆ. ಇದರಿಂದ ಅತಿಯಾದ ನೋವು ಅಥವಾ ಹೆಚ್ಚಿನ ಅಪಾಯ ತಡೆಗಟ್ಟಲು ಸಹಾಯವಾಗುತ್ತದೆ.

- ಸಮಗ್ರ ತುರ್ತು ಹೆರಿಗೆ ಸೇವೆಗಳು ಮತ್ತು ನವಜಾತ ಶಿಶು ಸೇವೆಗಳು ಸ್ಥಳೀಯ ಮಟ್ಟದಲೇ ಅಂದರೆ ತಾಲ್ಲೂಕು ಮಟ್ಟದಲ್ಲಿ ಮತ್ತು ಕೆಲವು ಹೋಬಳಿ ಮಟ್ಟದಲ್ಲಿ ದೊರೆಯುವುದರಿಂದ ರಾಜ್ಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಾಯಿ ಮತ್ತು ನವಜಾತ ಶಿಶುಗಳು ಉಳಿಯುವಂತಾಗುತ್ತದೆ.
- ಕಡಿಮೆ ಕಾರ್ಯಕ್ಷಮತೆಯುಳ್ಳ 163 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಸಾಮಾನ್ಯ ಖಾಯಿಲೆಗಳಾದ ಜ್ವರ, ಕೆಮ್ಮು, ನೆಗಡಿ, ಹೊಟ್ಟೆನೋವು, ತಲೆನೋವು, ಮೈ ಕೈ ನೋವು, ಪ್ರಸವ ಪೂರ್ವ ಆರೈಕೆ ಹಾಗೂ ತುರ್ತು ಸೇವೆಗಳಾದ ಸಹಜ ಹೆರಿಗೆ, ಹಾವು ಕಡಿತ, ನಾಯಿ ಕಡಿತ, ನಿರ್ಜಲೀಕರಣ, ವಿಷ ಸೇವನೆಗೆ ಪ್ರಥಮ ಚಿಕಿತ್ಸೆ ಮುಂತಾದ ಸಂದರ್ಭಗಳಲ್ಲಿ 24/7 ಸೇವೆ ನೀಡಲು 3 ವೈದ್ಯಾಧಿಕಾರಿಗಳು, 1 ಮಕ್ಕಳ ತಜ್ಞರು/ಫಿಶೀಷಿಯನ್, 1 ದಂತ ಆರೋಗ್ಯಾಧಿಕಾರಿ ಹುದ್ದೆಗಳು ಮಂಜೂರಾಗಿದ್ದು, ಈ ಹುದ್ದೆಗಳನ್ನು ಭರ್ತಿ ಮಾಡಿ BEmONC ಮತ್ತು ತುರ್ತ ಸೇವೆಗಳನ್ನು ನೀಡುವ ಮೂಲಕ ಸದರಿ ಆರೋಗ್ಯ ಕೇಂದ್ರಗಳನ್ನು ಬಲವರ್ಧನೆಗೊಳಿಸಲಾಗುತ್ತಿದೆ.

ರಾಜ್ಯದಲ್ಲಿ ಆರೋಗ್ಯ ಸೇವೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಕಡಿಮೆ ಹೆರಿಗೆಗಳಾಗುವ (low performing) ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಂ.ಸಿ.ಹೆಚ್., ಸೇವೆಗಳು, ಅಂದರೆ ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗಳ ತಜ್ಞರನ್ನು, 100 ಹಾಸಿಗೆಗಳ ತಾಲ್ಲೂಕು ಆಸ್ಪತ್ರೆಗಳು ಮತ್ತು ಹೆಚ್ಚು ಹೆರಿಗೆಗಳಾಗುವ ಉತ್ತಮ ಕಾರ್ಯನಿರ್ವಹಣೆಯ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಮರುಹಂಚಿಕೆ ಮಾಡಲಾಗಿದೆ. ಇದರಿಂದ ರಾಜ್ಯದ ಎಲ್ಲಾ ತಾಲ್ಲೂಕು ಆಸ್ಪತ್ರೆಗಳಲ್ಲಿ ಎಂ.ಸಿ.ಹೆಚ್., ತಜ್ಞರ ಹಂಚಿಕೆ ಸಮನಾಗಿ ಆಗುತ್ತಿದ್ದು ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಯನ್ನು 24/7 ರೀತಿಯಲ್ಲಿ ಲಭ್ಯವಾಗುವಂತೆ ಖಾತರಿಪಡಿಸಿಕೊಳ್ಳಲು ಸಹಾಯಕವಾಗಿದೆ. ಆದ್ದರಿಂದ ಈ ಸುಧಾರಣಾ ಪ್ರಕ್ರಿಯೆಯು ಉತ್ತಮ ಸಾರ್ವಜನಿಕ ಆರೋಗ್ಯ ಸೇವೆಗೆ ಪೂರಕವಾಗಲಿದೆ.

**(ಆಕುಕ 29 ಹೆಚ್ಎಸ್‌ಡಿ 2026)**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು